<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u>

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 18.08.2022
ಪಾಟಿ ಸವಾಲು : 2 ನೇ ಪ್ರತಿವಾದಿ ಪರ ಶ್ರೀ ಎನ್.ಎನ್.ಆರ್. ವಕೀಲರಿಂದ

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ದಾವಾ ಸ್ವತ್ತನ್ನು ಚೆನ್ನಪ್ಪನವರಿಂದ ಖರೀದಿ ಮಾಡಿದ್ದೇನೆ. ನಾನು ಎರಡೂವರೆ ಗುಂಟೆ ವಿಸ್ತೀರ್ಣದ ಜಮೀನನ್ನು ಚೆನ್ನಪ್ಪನವರಿಂದ ಖರೀದಿ ಮಾಡಿದ್ದೇನೆ. ನಾನು ಒಂದೇ ಸ.ನಂ.ನಲ್ಲಿನ ಎರಡೂವರೆ ಗುಂಟೆ ಜಮೀನನ್ನು ಖರೀದಿ ಮಾಡಿದ್ದೇನೆ.

2 ನೇ ಪ್ರತಿವಾದಿ ತಾನು ಖರೀದಿ ಮಾಡಿದ ನನ್ನ ಪಕ್ಕದ ನಿವೇಶನದಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿ ಮನೆ ಕಟ್ಟುತ್ತಿದ್ದ ಜಾಗಕ್ಕೆ ನಾನು ಹೋಗಿದ್ದು ಅವರುನಮ್ಮ ಜಾಗವನ್ನು ಒತ್ತುವರಿ ಮಾಡಿ ಕಟ್ಟುತ್ತಿದದ್ದುನ್ನು ಗಮನಿಸಿ ಅವರಿಗೆ ತಿಳಿಸಿರುತ್ತೇವೆ. ನಾನು ಪುರಸಭೆ ಹಾಗೂ ತಹಶೀಲ್ದಾರ್ ಕಛೇರಿಗೆ 2 ನೇಪ್ರತಿವಾದಿ ನಮ್ಮ ಜಾಗವನ್ನು ಒತ್ತುವರಿ ಮಾಡಿ ಮನೆ ಕಟ್ಟುತ್ತಿದ್ದ ಬಗ್ಗೆ ದೂರು ನೀಡಲು ಹೋಗುತ್ತಿದ್ದೇನೆ ಆದರೆ ಅವರು ಅದನ್ನು ಸ್ವೀಕರಿಸಿರುವುದಿಲ್ಲ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ಈ ದಾವೆ ಸಲ್ಲಿಸುವ ಕಾಲಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಚೆನ್ನಪ್ಪನವರಿಗೆ 2 ನೇ ಪ್ರತಿವಾದಿ ನಮ್ಮ ಜಾಗವನ್ನು ಒತ್ತುವರಿ ಮಾಡಿದ ಬಗ್ಗೆ ತಿಳಿಸಿಲ್ಲ. 2 ನೇ ಪ್ರತಿವಾದಿ ಎರಡು ಮೀಟರ್ ಗಳಷ್ಟು ಜಾಗವನ್ನು ಬಿಟ್ಟು ಮನೆ ಕಟ್ಟಿಕೊಂಡಿದ್ದಾರೆ ನಮ್ಮ ಜಾಗವನ್ನು ಒತ್ತುವರಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಲಾಗಿ ಅದರಲ್ಲಿರುವ ಮನೆಗಳು 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಗೆ ಸೇರಿದವು ಎಂದು ಒಪ್ಪಿದ್ದು ಭಾವಚಿತ್ರವನ್ನು ನಿಡಿ.5 ಎಂದು ಗುರುತಿಸಲಾಯಿತು. ನಿಡಿ.1 ಭಾವಚಿತ್ರದಲ್ಲಿ 2 ನೇಪ್ರತಿವಾದಿಯ ಮನೆಯ ಮುಂದೆ 1 ನೇ ಪ್ರತಿವಾದಿ ಮನೆ ಇದೆ ಎಂದರೆ ಸರಿ. ರಸ್ತೆಯಿಂದ ಉತ್ತರಕ್ಕೆ ಮೊದಲು 1 ನೇ ಪ್ರತಿವಾದಿ ಮನೆ ಬಂದು ನಂತರ 2 ನೇ ಪ್ರತಿವಾದಿ ಮನೆ ಬರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ತನ್ನ ಕುಟುಂಬ ಸದಸ್ಯರ ಜೊತೆ ನಿಡಿ.1 ರಲ್ಲಿ ತೋರಿಸಿರುವ ಮನೆಯಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ನಾನು, 1 ನೇ ಪ್ರತಿವಾದಿ ಹಾಗೂ 2 ನೇ ಪ್ರತಿವಾದಿ ಕೊಂಡಿರುವ ನಿವೇಶನಗಳ ಬಡಾವಣೆ ಯಾವುದು ಎಂದು ಹೇಳಲಾಗುವುದಿಲ್ಲ.

ನಾನು ದಾವಾ ಸ್ವತ್ತಿನ ಸಂಬಂಧ ಕಂದಾಯ ಕಟ್ಟಿಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಿಸಲು ನ್ಯಾಯಾಲಯದಿಂದ ನಿಯೋಗಿ ನೇಮಕ ಮಾಡಲು ನನ್ನ ತಕರಾರು ಇಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಸುಮಿತ್ರ ರವರ ಮನೆ ಇದೆ ಎಂದರೆ ಸರಿ. ನನ್ನ ಜಾಗವನ್ನು ಸುಮಿತ್ರಮ್ಮ ಒತ್ತುವರಿ ಮಾಡಿದ್ದು 2ನೇ ಪ್ರತಿವಾದಿ ಒತ್ತುವರಿ ಮಾಡಿಲ್ಲ ಎಂದರೆ ಸುಳ್ಳು. ಸುಮಿತ್ರಮ್ಮ ಒತ್ತುವರಿ ಮಾಡಿಲ್ಲದ ಕಾರಣ ಆಕೆಯನ್ನು ಪಕ್ಷಗಾರರಾಗಿ ಮಾಡಿಲ್ಲ. 2ನೇ ಪ್ರತಿವಾದಿ 2 ಮೀಟರ್ ಜಾಗ ಬಿಟ್ಟು ಮನೆ ಕಟ್ಟಿಕೊಂಡಿದ್ದಾರೆ ಆದರೂ ಕೂಡ ಆಕೆಯ ಮೇಲೆ ದ್ವೇಷದಿಂದ ಈ ದಾವೆ ಸಲ್ಲಿಸಲಾಗಿದೆ ಎಂದರ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.